ತಾಳ್ಮೆಯಿಂದ ಕಾಯುವುದೇ ಯಶಸ್ಸಿನ ಗುಟ್ಟು.

— ಡ ಮೈಸ್ಟರ್

ತನ್ನ ಸದ್ಗುಣದ ವಿಷಯದಲ್ಲಿ ಇರುವ ಹೆಮ್ಮೆ ಎಲ್ಲ ಪಾಪಗಳನ್ನೂ ಮೀರಿಸುತ್ತದೆ.

— ವಿನೋಭಾ ಭಾವೆ

ನಾವು ಕಲಿಯಬೇಕಾದ ಶ್ರೇಷ್ಠ ಪಾಠ, ನಮಗಿಷ್ಟವಾದುದನ್ನು ಮಾಡುವುದಲ್ಲ, ನಾವು ಮಾಡುವುದನ್ನು ಇಷ್ಟಪಡುವುದು.

ಮೃತನ ನಿಜವಾದ ಗೋರಿ ಜೀವಿಸಿರುವವರ ಹೃದಯ.

ನಮ್ಮ ಪ್ರತಿಭೆ ಮತ್ತು ನಿರೀಕ್ಷೆಗಳ ಅಂತರವನ್ನೇ ದುಃಖವೆಂದು ಕರೆಯುವುದು.

— ಎಡ್ವರ್ಡ್ ಡ ಬೋನೊ

ಯಾವ ಪ್ರಯತ್ನವೂ ಇಲ್ಲದೆ ದೊರೆಯುವುದೆಂದರೆ ವೃದ್ಧಾಪ್ಯವೊಂದೇ.

ಪರಾಧೀನತೆಯೆಲ್ಲವೂ ದುಃಖ, ಸ್ವಾಧೀನತೆಯೆಲ್ಲವೂ ಸುಖ.

— ಮನು

ತಮ್ಮ ಕರ್ತವ್ಯವನ್ನು ಬಿಟ್ಟು 'ಕೃಷ್ಣ, ಕೃಷ್ಣ'ಎನ್ನುವವರು ಭಗವದ್ವೇಷಿಗಳು.

— ಸುಭಾಷಿತ

ದೇಹವು ಪರೋಪಕಾರದಿಂದ ಶೋಭಿಸುತ್ತದೆ, ಚಂದನದಿಂದಲ್ಲ; ಸದ್ಗ್ರಂಥ ಶ್ರವಣದಿಂದ ಕಿವಿ ಶೋಭಿಸುತ್ತದೆ, ಕುಂಡಲದಿಂದಲ್ಲ; ದಾನದಿಂದ ಕೈ ಶೋಭಿಸುತ್ತದೆ, ಬಳೆಯಿಂದಲ್ಲ.

— ನೀತಿ ಶತಕ

# ಪ್ರಾರ್ಥನೆ

ನಾನ್ಯಾ ಸ್ಪೃಹಾ ರಘುಪತೇ ಹೃದಯೇಽಸ್ಮದೀಯೇ
ಸತ್ಯಂ ವದಾಮಿ ಚ ಭವಾನಖಿಲಾಂತರಾತ್ಮಾ ।
ಭಕ್ತಿಂ ಪ್ರಯಚ್ಛ ರಘುಪುಂಗವ ನಿರ್ಭರಾಂ ಮೇ
ಕಾಮಾದಿದೋಷರಹಿತಂ ಕುರು ಮಾನಸಂ ಚ ॥

ಹೇ ರಘುಪತಿ, ನನ್ನ ಹೃದಯದಲ್ಲಿ ಮತ್ತಾವ ಆಶೆಯೂ ಇಲ್ಲ. ನಾನು ಸತ್ಯವಾಗಿ ಹೇಳುತ್ತೇನೆ; ನೀನು ಸಮಸ್ತಭೂತಗಳ ಹೃದಯದಲ್ಲಿರುವ ಅಂತರಾತ್ಮನು; ನನಗೆ ಪೂರ್ಣಭಕ್ತಿಯನ್ನಿತ್ತು, ನನ್ನ ಮನಸ್ಸಿನಿಂದ ಕಾಮಾದಿಗಳು ಹೋಗುವ ಹಾಗೆ ಮಾಡು.

ಪರಧನ-ಪರದಾರ-ವರ್ಜಿತಾನಾಂ
ಪರಗುಣಭೂತಿಸುತುಷ್ಟಮಾನಸಾನಾಮ್ ।
ಪರಹಿತನಿರತಾತ್ಮನಾಂ ಸುಸೇವ್ಯಂ
ರಘುವರಮಂಬುಜಲೋಚನಂ ಪ್ರಪದ್ಯೇ ॥

ಪರಧನವನ್ನು ಮತ್ತು ಪರಸ್ತ್ರೀಯರನ್ನು ತ್ಯಜಿಸಿದವರಿಗೆ, ಅನ್ಯರ ಸಂಪತ್ತನ್ನು ಮತ್ತು ಸುಗುಣಗಳನ್ನು ನೋಡಿ ಸಂತುಷ್ಟರಾದವರಿಗೆ, ಯಾವಾಗಲೂ ಪರಹಿತದಲ್ಲಿ ನಿರತರಾಗಿರುವವರಿಗೆ ಸುಲಭಸೇವ್ಯನೂ, ಅಂಬುಜಾಕ್ಷನೂ ಆದ ರಘುವರನಲ್ಲಿ ಶರಣಾಗುತ್ತೇನೆ.

ಅಹಂ ಪ್ರಪನ್ನೋಽಸ್ಮಿ ಪದಾಂಬುಜಂ ಪ್ರಭೋ
ಭವಾಪವರ್ಗಂ ತವ ಯೋಗಿಭಾವಿತಮ್ ।
ಯಥಾಽಂಜಸಾಽಜ್ಞಾನಮಪಾರವಾರಿಧಿಂ
ಸುಖಂ ತರಿಷ್ಯಾಮಿ ತಥಾಽನುಶಾಧಿ ಮಾಮ್ ॥

ಹೇ ಪ್ರಭು, ಯೋಗಿಗಳು ಧ್ಯಾನಿಸುವ, ಸಂಸಾರಸಾಗರದಿಂದ ಪಾರುಮಾಡುವ, ನಿನ್ನ ಪಾದಪದ್ಮಗಳಲ್ಲಿ ನಾನು ಪ್ರಪನ್ನನಾಗುತ್ತೇನೆ; ಅಪಾರವಾದ ಅಜ್ಞಾನವೆಂಬ ಸಮುದ್ರವನ್ನು ಶೀಘ್ರವಾಗಿ ಮತ್ತು ಸುಖವಾಗಿ ದಾಟುವಂತೆ ನನಗೆ ಬೋಧಿಸು.

ಪ್ರಸನ್ನತಾಂ ಯಾ ನ ಗತಾಭಿಷೇಕತ-
ಸ್ತಥಾ ನ ಮಮ್ಲೌ ವನವಾಸದುಃಖತಃ ।
ಮುಖಾಂಬುಜಶ್ರೀ ರಘುನಂದನಸ್ಯ ಮೇ
ಸದಾಽಸ್ತು ಸಾ ಮಂಜುಲಮಂಗಲಪ್ರದಾ ॥

ಪಟ್ಟಾಭಿಷೇಕದ ಕಾಲದಲ್ಲಿ ಯಾರ ಮುಖಕಾಂತಿ ಹೆಚ್ಚಲಿಲ್ಲವೊ, ವನವಾಸದ ದುಃಖದಿಂದ ಬಾಡಲಿಲ್ಲವೊ, ರಘುನಂದನನ ಅಂತಹ ಮುಖಾಂಬುಜಶ್ರೀ ನನಗೆ ಯಾವಾಗಲೂ ಮಂಜುಳವಾದ ಮಂಗಲವನ್ನು ಉಂಟುಮಾಡಲಿ.